## ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ : ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ದೈಹಿಕ ಶಿಕ್ಷಕರ ಹುದ್ದೆಯನ್ನು ಬೋಧಕ (ಟೀಚಿಂಗ್) ಸಿಬ್ಬಂದಿ ಎಂದು ಪರಿಗಣಿಸುವ ಬಗ್ಗೆ

ಉಲ್ಲೇಖ: 1) ಸರ್ಕಾರಿ ಪತ್ರ ಸಂಖ್ಯೆ : 58 ಎಸ್ ಒಹೆಚ್ 96, ದಿನಾಂಕ : 6-1-1996

2) ಸರ್ಕಾರ ಆದೇಶ ಸಂಖ್ಯೆ : ಇಡಿ 227 ಯುಪಿಸಿ : 97, ದಿನಾಂಕ : 17-11-97.

ಪ್ರಸ್ತಾವಣೆ :

ಮೇಲೆ (1)ರಲ್ಲಿ ಓದಲಾದ ಸರ್ಕಾರಿ ಪತ್ರದಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ದೈಹಿಕ ಶಿಕ್ಷಣದ ನೇಮಕಾತಿಯನ್ನು ಅನುಮೋದಿಸುವಾಗ ಬೋಧಕ ಸಿಬ್ಬಂದಿ ಎಂದೇ ಪರಿಗಣಿಸಿ ಅನುಮೋದಿಸಲಾಗುತ್ತಿದೆ; ಹಾಗೂ ಈ ಬಗ್ಗೆ ಸದರಿ ಪತ್ರದಲ್ಲಿ ನಿರ್ದೇಶಕರಿಗೆ ಸ್ಪಷ್ಟೀಕರಣ ಸಹ ನೀಡಲಾಗಿದೆ. ಆದರೆ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿ ದೈಹಿಕ ಶಿಕ್ಷಕರನ್ನು ಬೋಧಕರು ಎಂದು ಪರಿಗಣಿಸಲಾಗುತ್ತಿದ್ದ ಬಗ್ಗೆ ಯಾವುದೇ ಅಧಿಕೃತ ಸರ್ಕಾರದ ಆದೇಶ ಇರುವುದಿಲ್ಲ ಮತ್ತು ಮೇಲೆ (2)ರಲ್ಲಿ ಓದಲಾದ ಸರ್ಕಾರಿ ಆದೇಶದಲ್ಲಿ ಕಾಲೇಜು ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ದೈಹಿಕ ಶಿಕ್ಷಕ ನಿರ್ದೇಶಕರುಗಳನ್ನು ಬೋಧಕ (ಟೀಚರ್ಸ್) ಸಿಬ್ಬಂದಿ ಎಂದು ಆದೇಶ ಹೊರಡಿಸಲಾಗಿದೆ. ಈ ಹಿನ್ನೆಲೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಯಲ್ಲಿನ ದೈಹಿಕ ಶಿಕ್ಷಕರನ್ನು ಸಹ ಬೋಧಕ (ಟೀಚಿಂಗ್) ಸಿಬ್ಬಂದಿ ಎಂದು ಪರಿಗಣಿಸಿ ಸರ್ಕಾರಿ ಆದೇಶ ಹೊರಡಿಸುವ ಬಗ್ಗೆ ಕೂಲಂಕಷವಾಗಿ ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಇಡಿ 113 ಎಸ್ ಒಹೆಚ್ 2000, ಬೆಂಗಳೂರು, ದಿ: 17-06-2001**

ಪ್ರಸ್ತಾವನೆಯಲ್ಲಿ ವಿವರಿಸಿರುವ ಹಿನ್ನೆಲೆಯಲ್ಲಿ ಪದವಿ ಪೂರ್ವ ಶಿಕ್ಷಣ ಇಲಾಖೆಗೆ ಸಂಬಂಧಿಸಿದಂತೆ ಸರ್ಕಾರಿ ಹಾಗೂ ಖಾಸಗಿ ಅನುದಾನಿತ ಸ್ವತಂತ್ರ/ಸಂಯುಕ್ತ ಪದವಿ ಪೂರ್ವ ಕಾಲೇಜುಗಳ ದೈಹಿಕ ಶಿಕ್ಷಕರ ಹುದ್ದೆಯನ್ನು ಬೋಧಕ ಸಿಬ್ಬಂದಿ (ಟೀಚಿಂಗ್) ಎಂದು ಪರಿಗಣಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ
(ಬಿ.ಎಸ್. ಸುರೇಂದ್ರನಾಥ್)
ಸರ್ಕಾರದ ಅಧೀನ ಕಾರ್ಯದರ್ಶಿ
ಶಿಕ್ಷಣ ಇಲಾಖೆ



kpeta.weebly.com

Scanned by CamScanner